ದಿನಾಂಕ 18 ನೇ ಜೂನ್ 2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಪರ ಶ್ರೀ ಎಂ.ಜಿ.ಆರ್. ವಕೀಲರಿಂದಃ-

ಸರ್ವೆ ನಂ 77/5, 77/22, 77/21 ಬಿ ಸ್ವತ್ತುಗಳು ನನ್ನ ತಂದೆ ಹಾಗೂ ಸಹೋದರರ ನಡುವೆ ದಿ. 08.06.1970 ರಂದು ವಿಭಾಗ ಆಗಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳ ವಿಭಾಗ ಆಗಿದೆ ಎಂದು ಅಸಲು ದಾವೆ 66/ ತೀರ್ಪು ಆಗಿದೆ ಎಂದರೆ ಸರಿ. ಅದರ ವಿಭಾಗದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ನನ್ನ ತಂದೆಗೆ ಅರ್ಧ ಹಿಸ್ಸೆ ಮಾತ್ರ ಇದೆ ಪೂರ್ತಿ ಹಕ್ಕು ಇಲ್ಲ ಎನ್ನುತ್ತಾರೆ. ಸರ್ವೆ ನಂ 57/1 ರಲ್ಲಿ ನನಗೆ ಪಾಲು ಇದೆ ನನ್ನ ಚಿಕ್ಕಪ್ಪ ಮತ್ತು ದೊಡ್ಡಪ್ಪ ಮಕ್ಕಳು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ದಿ. 26.02.2018 ರಂದು ನಾನು ನೋಟೀಸ್ ನ್ನು ಪ್ರತಿವಾದಿಗೆ ಕಳುಹಿಸಿದ್ದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನೋಟೀಸ್ ನಲ್ಲಿ ದಿ. 30.12.2015 ರಲ್ಲಿ ಸೆಟಲ್‌ಮೆಂಟ್ ಮಹಾಜರ್ ಆಗಿದೆ ಎಂದರೆ ಸರಿಯಲ್ಲ. ದಿ. 09.05.15 ರಲ್ಲಿ ಕುಟುಂಬ ಒಪ್ಪಂದ ಆಗಿದೆ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 99 ಕಡಂಗಾಲ ಎಂದರೆ ಸರಿಯಲ್ಲ. ಅದು ಸರ್ಕಾರದ ಆಸ್ತಿ ಎನ್ನುತ್ತಾರೆ. ಸರ್ವೆ ನಂ 99 ರಲ್ಲಿ 60, 70 ವರ್ಷದ ಕಾಫಿ ಗಿಡಗಳಿವೆ ಮತ್ತು ಸುಮಾರು 100 ವರ್ಷದ ಮರಗಳಿವೆ ಎಂದರೆ ಸರಿಯಲ್ಲ. ರಸ್ತೆ ಇದೆ ಎನ್ನುತ್ತಾರೆ. ಸದರಿ ರಸ್ತೆ ಕೆರೆ ತನಕ ಇದೆ ಅದರ ಉದ್ದ 2 ರಿಂದ 3 ಕಿಲೋ ಮೀಟರ್ ಇರಬಹುದು. ಸದರಿ 2 ರಿಂದ 3 ಕಿಲೋಮೀರ್ ದೂರದ ರಸ್ತೆಯಲ್ಲಿ 300 ಮೀಟರ್ ರಸ್ತೆ ಮಾತ್ರ ಬಳಸುತ್ತಿದ್ದಾರೆ ಉಳಿದ ರಸ್ತೆಯನ್ನು ಪ್ರತಿವಾದಿಯವರು ಕಬಳಿಸಿದ್ದಾರೆ. ಸರ್ವೆ ನಂ 99 ರಲ್ಲಿ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಸರ್ಕಾರಿ ದಾಖಲಾತಿಯನ್ನು ಕಡಂಗ ಎಂದೆ ನಮೂದಾಗಿದೆ ಎಂದರೆ ಸರಿಯಲ್ಲ. ಸರ್ವೆ ನಂ 99 ರಲ್ಲಿ ರಸ್ತೆಯನ್ನು ಬ್ಲಾಕ್ ಮಾಡಿದ್ದಾರೆ ಎನ್ನುತ್ತಾರೆ.

ಪಂಚಾಯಿತಿ ರಸ್ತೆ ನಿಟ್ಟೂರು ಮುಖ್ಯ ರಸ್ತೆಯಿಂದ ಪಾರಂಭವಾಗಿ ಅಳಮಿಂಗಡ ಕುಟುಂಬದವರ ಸ್ವತ್ತಿನಲ್ಲಿ ಕೊಯ್ಯಂಗಡ ಕುಟುಂಬದವರ ಸ್ವತ್ತಿನಲ್ಲಿ, ಮಾಚಂಗಡ ಕುಟುಬಂದವರ ಸ್ವತ್ತಿನಲ್ಲಿ, ಮಾಪಂಗಡ ಕುಟುಂಬದವರ ಸ್ವತ್ತಿನಲ್ಲಿ, ಮಾಪಂಗಡ ಕುಟುಂಬದವರ ಸ್ವತ್ತಿನಲ್ಲಿ, ಮಲ್ಲೆಂಗಡ ಕುಟುಬಂದವರ ಸ್ವತ್ತಿನಲ್ಲಿ, ಮಾಪಂಗಡ ಕುಟುಬಂದವರ ಸ್ವತ್ತಿನಲ್ಲಿ ಸದರಿ ರಸ್ತೆ ಮುಗಿಯತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆ ಡಾಂಬರು ರಸ್ತೆ ಎಂದರೆ ಸರಿ. ಮಾಂಚಿನವರ ಕುಟುಂಬದವರ ಸ್ವತ್ತಿನ ತನಿಖೆ ಡಾಂಬರು ರಸ್ತೆ ಇದೆ ಎಂದರೆ ಸರಿ. ಮಾಂಚಿನವರ ಕುಟುಂಬದವರ ಸ್ವತ್ತಿನಿಂದ ಮಾಪಂಗಡ

ಕುಟುಂಬದವರ ಸ್ವತ್ತಿನ ತನಕ ಡಾಂಬರು ರಸ್ತೆ ಇದೆ ಎಂದರೆ ಅದು ನನ್ನ ಸ್ವಂತ ರಸ್ತೆ ಹಾಗೂ ನಾನೇ ಡಾಂಬರು ಹಾಕಿಸಿದ್ದೇನೆ ಎನ್ನುತ್ತಾರೆ. ಸದರಿ ಡಾಂಬರ್ ನ್ನು ಪಂಚಾಯಿತಿಯವರು ಹಾಕಿದ್ದಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಾಯವಾಕಾಶ ಕೋರಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.